# ಎಲ್ಲಿಯೂ ನಿಲ್ಲಲಾರೆ

■ಪದ್ಮನಾಭ ಭಟ್

**ಭದ್ರಾವತಿಯಿಂದ ಮುಂಬೈಗೆ ಜಿಗಿದು, ಬಾಲಿವುಡ್ 'ಜಂಗ್ಲಿ'ಯಲ್ಲಿ ಸುತ್ತಾಡಿ, 'ರಾಬರ್ಟ್' ಕರೆಗೆ ಓಗೊಟ್ಟು ಕನ್ನಡಕ್ಕೆ ಮರಳಿರುವ ಬೆಡಗಿ ಆಶಾ ಭಟ್.**



'ಕರ್ನಾಟಕ ಕ್ರಿಕೆಟ್ ಆಟಗಾರ ಕರ್ನಾಟಕದಲ್ಲಿ ಮಾತ್ರ ಆಟವಾಡಬೇಕು ಎಂದು ನಾವು ಬಯಸುತ್ತೇವೆಯೇ? ಅವರು ಅಂತರರಾಷ್ಟ್ರೀಯ ಮಟ್ಟದಲ್ಲಿ ಆಡಿ ನಮ್ಮ ರಾಜ್ಯಕ್ಕೆ ಹೆಸರು ತರಬೇಕು ಎಂದು ಬಯಸುವುದಿಲ್ಲವೇ?' ಹೀಗೆ ಪ್ರಶ್ನೆಯೆಸೆದು ನಕ್ಕರು ಆಶಾ ಭಟ್. ತಮ್ಮ ವೃತ್ತಿಬದುಕಿನ ಕುರಿತೂ ಅವರು ಇಷ್ಟೇ ಸ್ಪಷ್ಟವಾಗಿ ಮಾತನಾಡಿದರು.

'ನಾನು ಭದ್ರಾವತಿಯ ಹುಡುಗಿ. ಹಾಗಂತ ಭದ್ರಾವತಿಗೆ ಮಾತ್ರ ನನ್ನನ್ನು ಸೀಮಿತಗೊಳಿಸಿಕೊಂಡರೆ ಬೆಳೆಯಲು ಸಾಧ್ಯವೇ? ಓರ್ವ ನಟಿಯಾಗಿ ನನಗೆ ದೇಶ, ಭಾಷೆಗಳ ಗಡಿರೇಖೆಗಳಿಲ್ಲ. ಹಿಂದಿಯಷ್ಟೇ ಅಲ್ಲ, ಮುಂದೆ ಹಾಲಿವುಡ್ ಸಿನಿಮಾದಲ್ಲಿಯೂ ನಟಿಸಬಹುದು. ಆದರೆ ಆಗಲೂ ನಾನು ನನ್ನ ತಾಯಿನೆಲವನ್ನು, ನನ್ನೂರಿನ ಜನರನ್ನು ಮರೆಯುವುದಿಲ್ಲ. ಎಲ್ಲಿಯೇ ಹೋದರೂ ನಾನು ಭದ್ರಾವತಿಯ ಹುಡುಗಿಯಾಗಿಯೇ ಇರುತ್ತೇನೆ. ಈ ನೆಲದಲ್ಲಿ ಬೇರುಬಿಟ್ಟು ಎತ್ತರಕ್ಕೆ ಬೆಳೆಯಬೇಕು ಎನ್ನುವುದು ನನ್ನ ಆಸೆ' ಎಂದು ಹೇಳುವ ಈ ಹುಡುಗಿ, 'ರಾಬರ್ಟ್' ಸಿನಿಮಾದಲ್ಲಿ ದರ್ಶನ್ ಜೊತೆ ನಾಯಕಿಯಾಗಿ ನಟಿಸುತ್ತಿದ್ದಾರೆ.

ಹತ್ತನೇ ತರಗತಿಯವರೆಗೆ ಭದ್ರಾವತಿಯಲ್ಲಿಯೇ ಬೆಳೆದ ಆಶಾ ನಂತರ ಮುಂಬೈಗೆ ಹೋದರು. ಆದರೆ ಇಂದಿಗೂ ಅವರು ತನ್ನ ಬಾಲ್ಯವನ್ನು ಕಳೆದ ಆ ಊರನ್ನು, ಊರಿನ ಜನರನ್ನು ತುಂಬ ಉತ್ಸಾಹದಿಂದ ನೆನಪಿಸಿಕೊಳ್ಳುತ್ತಾರೆ. 'ನನ್ನ ಭದ್ರಾವತಿಯನ್ನು ನೆನಪಿಸಿಕೊಳ್ಳುವ ಪ್ರಶ್ನೆಯೇ ಇಲ್ಲ. ಮರೆತರೆ ತಾನೆ ನೆನಪಿಸಿಕೊಳ್ಳುವುದು? ನಾನು ಸಂಗೀತ, ನೃತ್ಯ, ರಂಗಭೂಮಿ ಈ ಎಲ್ಲ ಕ್ಷೇತ್ರಗಳಲ್ಲಿ ಅಭಿರುಚಿ ಬೆಳೆಸಿಕೊಂಡಿದ್ದು ಅಲ್ಲಿಯೇ. ನಾನು ಇವತ್ತು ಏನಾಗಿದ್ದೇನೋ ಅದಕ್ಕೆ ಭದ್ರಾವತಿಯಲ್ಲಿ ಕಳೆದ ದಿನಗಳೇ ಕಾರಣ' ಎಂದು ಪುಳಕದಿಂದ ನೆನಪಿಸಿಕೊಳ್ಳುತ್ತಾರೆ.

ಮಾಡೆಲಿಂಗ್ ಕ್ಷೇತ್ರದಲ್ಲಿ ಕಾಲಿಟ್ಟು, 2014ರಲ್ಲಿ 'ಮಿಸ್ ಸೂಪರ್ ಇಂಟರ್ ನ್ಯಾಷನಲ್' ಸೌಂದರ್ಯ ಸ್ಪರ್ಧೆಯಲ್ಲಿ ಕಿರೀಟ ಮುಡಿಗೇರಿಸಿಕೊಂಡ ನಂತರ ಅವರು ಸಿನಿಮಾ ಕ್ಷೇತ್ರದತ್ತ ದೃಷ್ಟಿಹಾಯಿಸಿದ್ದು. ನಟನೆಗೆ ಇಳಿಯಬೇಕು ಎನ್ನುವುದು ಅವರ ಮನೆಯವರೆಲ್ಲರೂ ಕೂತು ಚರ್ಚಿಸಿ ಕೈಗೊಂಡ ನಿರ್ಧಾರ. ಹಾಗೆಂದು ಸಿನಿಮಾ ಕ್ಷೇತ್ರಗಳಲ್ಲಿ ಅವಕಾಶಗಳೇನೂ ಕಾದುಕೂತಿರಲಿಲ್ಲ. 'ತುಂಬ ಜನರಿಗೆ ಸಿನಿಮಾ ಕ್ಷೇತ್ರಕ್ಕೆ ಹೋದರೆ ರಾಶಿ ರಾಶಿ ಅವಕಾಶಗಳು ಸಿಕ್ಕಿಬಿಡುತ್ತವೆ. ಅವುಗಳಲ್ಲಿ ಯಾವುದಾದರೊಂದನ್ನು ಆಯ್ದುಕೊಂಡು ನಟಿಸಿದರಾಯ್ತು ಎಂಬ ಭ್ರಮೆ ಇರುತ್ತದೆ. ಆದರೆ ಪರಿಸ್ಥಿತಿ ಹಾಗಿರುವುದಿಲ್ಲ. ನಾವು ಆಯ್ಕೆ ಮಾಡಿಕೊಳ್ಳುವ ಸ್ಥಾನದಲ್ಲಿ ಇರುವುದಿಲ್ಲ. ಅವಕಾಶವೇ ನಮ್ಮನ್ನು ಆಯ್ದುಕೊಳ್ಳುವವರೆಗೆ ಕಾಯಬೇಕಾಗುತ್ತದೆ. ನಾನು ಹಲವು ಕಡೆಗಳಲ್ಲಿ ಆಡಿಷನ್ ಕೊಟ್ಟ ನಂತರ ನನಗೆ ಹಿಂದಿಯಲ್ಲಿ 'ಜಂಗ್ಲಿ' ಸಿನಿಮಾದಲ್ಲಿ ನಟಿಸುವ ಅವಕಾಶ ಸಿಕ್ಕಿದ್ದು' ಎಂದು ಮೊದಲ ಅವಕಾಶ ಪಡೆದ ಬಗೆಯನ್ನು ಅವರು ನೆನಪಿಸಿಕೊಳ್ಳುತ್ತಾರೆ.

'ಜಂಗ್ಲಿ' ಅವರ ಪಾಲಿಗೆ ಚಿತ್ರರಂಗದ, ನಟನೆಯ ಬಗೆಗಿನ ಪಾಠಶಾಲೆಯಾಗಿಯೂ ಪರಿಣಮಿಸಿತು. 'ನನ್ನ ಮೊದಲ ಸಿನಿಮಾದಲ್ಲಿಯೇ ನಾನು ಸಾಕಷ್ಟು ಸವಾಲುಗಳನ್ನು ಎದುರಿಸಬೇಕಾಯ್ತು. ಎರಡು ಮೂರು ತಿಂಗಳಲ್ಲಿ ಮುಗಿಸಿದ ಸಿನಿಮಾ ಇದಲ್ಲ. ನನ್ನ ಮೊದಲ ಸಿನಿಮಾಗಾಗಿ ನಾನು ಒಂದೂವರೆ ವರ್ಷಗಳನ್ನು ಕೊಟ್ಟಿದ್ದೇನೆ. ಹಾಗಾಗಿಯೇ ನನಗೆ ಅಲ್ಲಿ ಸಾಕಷ್ಟು ವಿಷಯಗಳನ್ನು ಕಲಿತುಕೊಳ್ಳಲೂ ಸಾಧ್ಯವಾಗಿದೆ' ಎನ್ನುವ ಆಶಾ, ಈಗ ಅವಕಾಶಗಳನ್ನು ತಾನೇ ಆಯ್ದುಕೊಳ್ಳುವ ಸ್ಥಾನಕ್ಕೆ ಏರಿದ್ದಾರೆ.

'ಸಿನಿಮಾದಲ್ಲಿ ಕಥೆಯೇ ಕಿಂಗ್' ಎನ್ನುವುದು ಅವರ ಸ್ಪಷ್ಟ ನಿಲುವು. 'ಯಾವುದೋ ಒಂದು ಬಗೆಯ ಸಿನಿಮಾಗಳು, ಒಂದು ಬಗೆಯ ಪಾತ್ರಗಳಿಗಷ್ಟೇ ನನ್ನ ನಾನು ಸೀಮಿತಗೊಳಿಸಿಕೊಳ್ಳಲಾರೆ' ಎಂದೂ ಅವರು ಅಷ್ಟೇ ಸ್ಪಷ್ಟವಾಗಿ ಹೇಳುತ್ತಾರೆ. 'ಕಂಫರ್ಟ್ ಝೋನ್‌ನಲ್ಲಿ ಸೃಜನಶೀಲತೆ ಸಾಯುತ್ತದೆ. ಯಾವಾಗಲೂ ನಮಗೆ ಏನಾದರೂ ಸವಾಲುಗಳು ಎದುರಾಗುತ್ತಿರಬೇಕು. ಹಾಗಾಗಬೇಕು ಎಂದರೆ ಹೊಸ ಬಗೆಯ ಪಾತ್ರಗಳಲ್ಲಿ ನಟಿಸುತ್ತಿರಬೇಕು. ಮಹಿಳಾ ಪ್ರಧಾನ ಸಿನಿಮಾಗಳಲ್ಲಿಯೂ ನನಗೆ ನಟಿಸುವ ಆಸಕ್ತಿ ಇದೆ. ಆದರೆ ಅದಕ್ಕೇ ನನ್ನ ನಾನು ಸೀಮಿತಗೊಳಿಸಿಕೊಳ್ಳಲಾರೆ. ಕಲಾವಿದ ದೇಶ, ಭಾಷೆಗಳನ್ನು ಮೀರಿ, ಎಲ್ಲ ಬಗೆಯ ಚೌಕಟ್ಟು ದಾಟಿ ಬೆಳೆಯಬೇಕು. ಆದರೆ ತನ್ನ ಮೂಲವನ್ನು ಎಂದಿಗೂ ಮರೆಯಬಾರದು' ಎಂದು ಅವರು ತಮ್ಮ ಮೂಲಸ್ಮೃತಿಯನ್ನು ಪುನರುಚ್ಚರಿಸುತ್ತಾರೆ.

ಸದ್ಯಕ್ಕೆ 'ರಾಬರ್ಟ್' ಸಿನಿಮಾ ಚಿತ್ರೀಕರಣದಲ್ಲಿ ತೊಡಗಿಕೊಂಡಿರುವ ಆಶಾಗೆ ಈಗಾಗಲೇ ಹಲವು ಅವಕಾಶಗಳು ಬರುತ್ತಿವೆಯಂತೆ. ಆದರೆ ಅವುಗಳ ಕುರಿತು ಈಗಲೇ ಏನೂ ಹೇಳಲಾರೆ. ರಾಬರ್ಟ್ ಸಿನಿಮಾ ಮುಗಿದ ಮೇಲೆ ಅದರ ಕುರಿತು ಮಾತಾಡುತ್ತೇನೆ ಎಂದು ಅವರು ನಸುನಗುತ್ತಾರೆ. ■